# ಕನಕದಾಸರ ಸಾಹಿತ್ಯ ಕೃತಿಗಳಲ್ಲಿ ಸಾಮಾಜಿಕ ಮೌಲ್ಯಗಳು ಮತ್ತು ಪ್ರಸ್ತುತತೆ

**ಜ್ಯೋತಿಪ್ರಿಯಾ***

**DOI: https://doi.org/10.5281/zenodo.22300250**

**ABSTRACT**

ಕನ್ನಡದ ಪ್ರಮುಖ ಸಂತ ಕವಿ ದಾರ್ಶನಿಕ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಹದಿನಾರನೇ ಶತಮಾನದಲ್ಲಿಯೇ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದವರು. ಜಾತಿ ಪದ್ಧತಿ, ವರ್ಗ ತಾರತಮ್ಯ ಹಾಗೂ ಮೌಢ್ಯಗಳನ್ನು ಕಟುವಾಗಿ ಖಂಡಿಸಿದ ಅವರು, 'ರಾಮಧಾನ್ಯ ಚರಿತೆ'ಯಂತಹ ಕೃತಿಗಳ ಮೂಲಕ ಸಾಮಾಜಿಕ ನ್ಯಾಯ, ಶ್ರಮಿಕ ವರ್ಗದ ಮಹತ್ವ ಮತ್ತು ಸಮಾನತೆಯನ್ನು ಗಟ್ಟಿಯಾಗಿ ಪ್ರತಿಪಾದಿಸಿದರು. ಹುಟ್ಟಿದ ಕುಲಕ್ಕಿಂತ ವ್ಯಕ್ತಿಯ ಸಾಧನೆ ಹಾಗೂ ಆಂತರಿಕ ಶುದ್ಧಿಯೇ ಮನುಷ್ಯನನ್ನು ಶ್ರೇಷ್ಠನನ್ನಾಗಿಸುತ್ತದೆ ಎಂದು ಸಾರಿದರು. ಕಂದಾಚಾರ ಮತ್ತು ಬಾಹ್ಯ ಆಡಂಬರಗಳಿಗಿಂತ ನೈಜ ಭಕ್ತಿ, ಮಾನವೀಯತೆಗೆ ಒತ್ತು ನೀಡಿದ ಅವರ ಚಿಂತನೆಗಳು ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿವೆ. ಇಂದಿನ ಆಧುನಿಕ ಸಮಾಜದಲ್ಲಿ ವ್ಯಾಪಕವಾಗಿರುವ ಜಾತಿ ದ್ವೇಷ, ಅಸೂಯೆ ಮತ್ತು ಸ್ವಾರ್ಥಗಳ ನಡುವೆ, ಸಮಾನತೆಯ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕನಕದಾಸರ ವೈಚಾರಿಕ ಸಾಹಿತ್ಯವು ಇಂದಿಗೂ ದಾರಿದೀಪವಾಗಿ ಅತ್ಯಂತ ಪ್ರಸ್ತುತವಾಗಿದೆ.

**KEYWORDS**: ಕನಕದಾಸರು, ಸಾಮಾಜಿಕ ಮೌಲ್ಯಗಳು, ಕೀರ್ತನಾ ಸಾಹಿತ್ಯ, ಸಮಾನತೆ, ರಾಮಧಾನ್ಯ ಚರಿತೆ.

* **ಡಾ. ಜ್ಯೋತಿಪ್ರಿಯಾ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಪಿ. ದಯಾನಂದ ಪೈ – ಪಿ. ಸತೀಶ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು.

ದಾಸ ಶ್ರೇಷ್ಠರಲ್ಲಿ ಶ್ರೇಷ್ಠರಾದವರು ಕನಕದಾಸರು. ಕನಕದಾಸರು ಕನ್ನಡದ ಪ್ರಮುಖ ಸಂತ ಕವಿಗಳಲ್ಲಿ ಒಬ್ಬರು. ದಾಸ ಶ್ರೇಷ್ಠರು. ಅವರು ಮೇಲು ಜಾತಿ ಮತ್ತು ವರ್ಗದವರು ಒಡ್ಡಿದ ಅಗ್ನಿಪರೀಕ್ಷೆಯಲ್ಲಿ ತನ್ನನ್ನು ತಾನು ಒಡ್ಡಿ, ತನ್ನ ಭಕ್ತಿ–ಪ್ರತಿಭೆಗಳ ಮೂಲಕ ಜಾತಿ ಕಟ್ಟುಪಾಡುಗಳ ಬಂಧವನ್ನು ಮೀರಿ ನಡೆದ ದಾರ್ಶನಿಕ. ಅವರು ಅನುಭವಿಸಿದ ತಲ್ಲಣಗಳು ಮತ್ತು ಇಕ್ಕಟ್ಟುಗಳು ಅವರ ಕೃತಿಗಳಲ್ಲಿ ಹಲವು ಬಗೆಗಳಲ್ಲಿ ಮೂಡಿಬಂದಿವೆ. ಇಂತಹ ಕನಕದಾಸರು ಇಂದಿನ ವಿದ್ಯಮಾನಗಳನ್ನು ನಾಲ್ಕು ಶತಮಾನಗಳ ಹಿಂದೆಯೇ ತಮ್ಮ ಕೃತಿಗಳಲ್ಲಿ ಪ್ರಸ್ತುತ ಪಡಿಸಿದ್ದಾರೆ. ಅವರು ರಚಿಸಿದ ಕೃತಿಗಳು ಅಂದಿನ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ್ದಲ್ಲದೆ ಪ್ರಸ್ತುತ ದಿನಗಳಲ್ಲಿ ಸಹ ಸಮಾಜದ ಅಂಕುಡೊಂಕು ತಿದ್ದುತ್ತಿವೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕೀರ್ತನಾ ಸಾಹಿತ್ಯದ ಮೂಲಕ ಕನಕದಾಸರ ಕೊಡುಗೆ ಅಪೂರ್ವವಾದದ್ದು. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅವರು ಇತರ ಹರಿದಾಸರಿಗಿಂತ ಭಿನ್ನವಾದ ಕವಿ, ಕೀರ್ತನೆಕಾರ. ಅವರ ಕೃತಿಗಳು ಅಂದಿನ ವಿಚಾರಧಾರೆಗಳನ್ನು ಹೇಳುವುದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಸೂಚಿಸುತ್ತದೆ. ಕೀರ್ತನೆಗಳ ಮೂಲಕ ಜನಮಾನಸದ ಹೃದಯ, ಮನಸ್ಸು ತಟ್ಟಿದವರು ಕನಕದಾಸರು.

ಕನಕದಾಸರ ಸಾಹಿತ್ಯದಲ್ಲಿ ಮೌಢ್ಯವನ್ನು ನಿರಾಕರಿಸುವ ಹಾಗೂ ವೈಚಾರಿಕತೆಯನ್ನು ಪ್ರತಿಪಾದಿಸುವ ಚಿಂತನೆಗಳಿವೆ. ಕನಕದಾಸರ ಸಾಮಾಜಿಕ ಚಿಂತನೆಗಳು ಕೇವಲ ಜಾತಿ ಅಸಮಾನತೆಯ ವಿರೋಧಕ್ಕೆ ಸೀಮಿತವಾಗಿಲ್ಲ. ಅವರ ಕೀರ್ತನೆಗಳಲ್ಲಿ ಮೌಢ್ಯನಿರಾಕರಣೆಯ ಜೊತೆಗೆ ಮಾನವನ ಬದುಕನ್ನು ಉನ್ನತೀಕರಣಗೊಳಿಸುವ ಹಲವು ಮೌಲ್ಯಗಳು ಸೇರಿವೆ. ಅವರು ಕಂದಾಚಾರ, ಬೂಟಾಟಿಕೆ, ಒಣವೇದಾಂತಗಳನ್ನು ನಿಷ್ಠುರವಾಗಿ ಖಂಡಿಸಿದರು. ಉದಾತ್ತತೆ, ಭಾವ ಸೂಕ್ಷ್ಮತೆ, ಕಲಾತ್ಮಕತೆ, ಆಧ್ಯಾತ್ಮಿಕ, ತತ್ವ ಘನತೆ ಹಾಗೂ ಸಾಹಿತ್ಯಿಕ ಶ್ರೀಮಂತಿಕೆಗಳಿಂದ ಕನಕದಾಸರು ಶತಮಾನಗಳ ನಂತರವೂ ಪ್ರಸ್ತುತರಾಗುತ್ತಾರೆ. ಕಾಲಕಾಲಕ್ಕೆ ಮೌಲ್ಯಗಳು ಬದಲಾಗುತ್ತದೆ ಎನ್ನುವ ಮಾತಿದೆ. ಮೌಲ್ಯಗಳನ್ನು ಪ್ರತಿಯೊಂದು ಸಂದರ್ಭಕ್ಕೂ ಅನುಗುಣವಾಗುವಂತೆ ರಚಿಸಿದ ದಾರ್ಶನಿಕ ಕನಕದಾಸರು. ಸಾಮಾಜಿಕ ವೈರುಧ್ಯಗಳನ್ನು ತಿದ್ದಲು ಭಕ್ತಿಪಂಥದ ಮೂಲಕ ಕನಕದಾಸರು ಮಾಡಿದ ಪ್ರಯತ್ನಗಳು ಇಂದಿಗೂ ಪ್ರಸ್ತುತ.

**ಸಾಮಾಜಿಕ ಮೌಲ್ಯಗಳು ಮತ್ತು ಪ್ರಸ್ತುತತೆ**

ಹದಿನಾರನೇ ಶತಮಾನದಲ್ಲಿ ಬಾಳಿ, ಬದುಕಿದ ಕನಕದಾಸರ ಜೀವನದಲ್ಲಾದ ಒಂದು ಘಟನೆಯು ಅವರನ್ನು ಭಕ್ತಿಪಂಥದ ಕಡೆಗೆ ತೊಡಗಿಸಿಕೊಳ್ಳುವಂತೆ ಮಾಡಿತು. ಸರಳ ವ್ಯಾಖ್ಯಾನಗಳು ಅವರ ಕೃತಿಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಅವರ ಸಾಮಾಜಿಕ ಕಳಕಳಿ, ದೇವರನ್ನು ಒಲಿಸಿಕೊಳ್ಳುವ ಪರಿ, ಅಸಮಾನತೆಯ ವಿರುದ್ಧ ಅವರು ಸಿಡಿದೆದ್ದ ಪರಿ ಇವೆಲ್ಲವೂ ಅತ್ಯಂತ ರೋಚಕ ಮತ್ತು ಅದು ಇಂದಿಗೂ ಪ್ರಸ್ತುತ.

'ಸಂಸ್ಕೃತಿ' ಎನ್ನುವ ಮಾತು ಜೀವಪರ ಕಾಳಜಿಯ ಮಾನವೀಯತೆಯನ್ನು ಗೌರವಿಸುವ ಸಂಗತಿಗೆ ಸಂಬಂಧಿಸಿದ್ದು. ಮುಂದುವರಿದ ರೂಪವಾದ ನಾಗರೀಕತೆ, ಅಭಿವೃದ್ಧಿಯ ಅರ್ಥವನ್ನು ಪ್ರತಿಪಾದಿಸುತ್ತಲೇ ಒಂದಷ್ಟು ವಿಲಾಸಿತವನ್ನು ಗುರುತಿಸಿತು. ಈ ಹೊತ್ತಿನ ಮತ್ತೂ ಮುಂದುವರಿದ ರೂಪ ಆಧುನಿಕತೆಯ ಹೆಸರಿನಲ್ಲಿದೆ. ಎಲ್ಲವೂ ಅಂತಿಮ ರೂಪದಲ್ಲಿ ಎನ್ನಬಹುದಾದ ಇದು ತನ್ನ ಉತ್ಕರ್ಷ ಸ್ಥಿತಿಯಿಂದಲೇ ವಿನಾಶದೆಡೆಗೂ ಚಲಿಸಬಹುದೇ? ಎಂಬ ಅನುಮಾನ ಕಾಡುತ್ತದೆ. ಇಂದು ನಾವು ಏನಾಗಿದ್ದೇವೆ? ಎಂದು ಆತ್ಮಾನವಲೋಕನ ಮಾಡುವ ಪರಿ, ಸಾಮಾಜೀಕರಣದ ಮುಖಾಮುಖಿಯಾಗಬೇಕಾದ ಸಾಮಾನ್ಯರ ಬದುಕು ಧರ್ಮರಾಜಕಾರಣವಾಗುತ್ತಿರುವುದು ಒಳಿತಿನ ಸೂಚನೆಯಂತೂ ಖಂಡಿತಾ ಅಲ್ಲ. "ನಿಮ್ಮ ಮನವ...ತನುವ ಸಂತೈಸಿಕೊಳ್ಳಿ" ಎಂದು ಹೇಳುವುದು ಸುಲಭವಲ್ಲ. ಕನಕದಾಸರು ನಮ್ಮೊಳಗಿನ ಚೇತನವಾಗಿ ಕಾಡಬೇಕಿರುವುದೇ ಇಲ್ಲಿಯೇ.

ಇತಿಹಾಸ ಪುರುಷನಾದ ಕನಕದಾಸರು ನಮ್ಮ ನಡುವೆ ಬಾಳಿ ಬದುಕಿದವರು. ಅವರು ಪ್ರಯೋಗಶೀಲತೆಗೆ ತನ್ನನ್ನು ತಾನು ಒಡ್ಡಿಕೊಳ್ಳುತ್ತಲೇ ಇರುವುದನ್ನು ಖಂಡಿತವಾಗಿ ಸಾಧಿಸಿದವರು ಇಂತಹ ಕನಕದಾಸರು ಐತಿಹ್ಯ-ದಂತಕತೆಗಳ ನಡುವೆಯೂ ಸಾಂಕೇತಿಕ ನೆಲೆಯಲ್ಲಿ ನಂಬಿಕೆಯಂತೆಯೂ ಕಾಣಸಿಗುವುದುಂಟು. ಕನಕದಾಸರ ಜೋಳಿಗೆಯಲ್ಲಿ ಭಕ್ತಿಯ ಸಿಂಚನವಿದೆ, ಅವರ ನುಡಿ ಮುತ್ತುಗಳಲ್ಲಿ ಮಧುರಾಮೃತವಿದೆ, ನಮ್ಮನ್ನು ಕಾಯುವವನೊಬ್ಬನಿದ್ದಾನೆ ಬೇಕು, ಬೇಡಗಳನ್ನು ಈಡೇರಿಸುವವನು ಅವನೇ ಎಂದಾಗ ಮನಸ್ಸು ತುಂಬಿ ಬರುತ್ತದೆ. ಭಾರವಾದ ಹೃದಯ ಹಗುರವಾಗುತ್ತದೆ. ಜಗದ ಜಂಜಾಟದಲ್ಲಿ ಸ್ವಾರ್ಥಲಾಲಸೆಗಳಲ್ಲಿ ಮನವೇಕೋ ಮುದುಡಿದೆ. ಬಾಡಿದ ಹೂವಾಗಿದೆ, ಮುದುಡಿದ ಮನವ ತಣಿಸುವುದೆಂತು? ಮತ್ತೆ ಅದರಲ್ಲಿ ಚೈತನ್ಯವ ತುಂಬುವುದೆಂತು? ಸಾಂತ್ವನದ ನುಡಿ ಬಿಂದುಗಳನ್ನು ಸಿಂಪಡಿಸಿದರೆ ಸಾಲದು ಅದರೊಂದಿಗೆ ಆಧ್ಯಾತ್ಮದ ಆಪ್ತತೆಯ ಸವಿ ಬೆರೆಸಬೇಕೆಂದರು ಕನಕದಾಸರು. "ತನು ನಿನ್ನದು ಜೀವನ ನಿನ್ನದು ರಂಗ, ಅನುದಿನದಲ್ಲಿ ಬಾಹ್ಯ ಸುಖ ದುಃಖ ನಿನ್ನದಯ್ಯ" ಸರ್ವಶಕ್ತನಂತೆ ಮೆರೆಯುತ್ತಿರುವ ಮನುಷ್ಯರ ಸ್ವಾತಂತ್ರ್ಯವನ್ನು ಪ್ರಶ್ನಿಸಿದರು ದಾಸರು. 'ಸ್ವಾತಂತ್ರ್ಯ' ಎನ್ನುವ ಭ್ರಾಂತಿಯನ್ನು ಕಳೆದುಕೊಳ್ಳುವುದರಲ್ಲೇ ಬದುಕನ್ನು ಪಡೆದುಕೊಳ್ಳುವ ಗುಟ್ಟು ಅಡಗಿದೆ ಎಂಬುವುದನ್ನು ತೋರಿಸಿದವರು. ಕನಕದಾಸರ ಸಾಹಿತ್ಯ ಅರಗಿಸಿಕೊಳ್ಳುವುದು ಕಷ್ಟವಾದರೂ, ಬುದ್ಧಿಶಕ್ತಿಗೆ, ತಿಳುವಳಿಕೆಗೆ ಸವಾಲಾಗಿವೆ. ಇಂದಿನ ಜನರ ಜೀವನಶೈಲಿಗೆ ಪೂರಕವಾಗಿವೆ.

ಸ್ವಸ್ಥಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯ ಅವಶ್ಯಕತೆ ಇದೆ. ಅದು ಭಗವದ್ಭಕ್ತಿಯಿಂದ ಲಭಿಸುವುದು. ನಾಸ್ತಿಕತೆಯು ಮನುಷ್ಯರಲ್ಲಿ ತಲ್ಲಣವನ್ನು, ನಿರಾಸೆಯನ್ನು ಭ್ರಮೆಯನ್ನು, ಹತಾಶೆಯನ್ನು ಉಂಟು ಮಾಡುತ್ತದೆ. ದೇವರಲ್ಲಿ ಅನನ್ಯ ಭಕ್ತಿಯನ್ನು ಸಾರುವ- 'ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ', ಮುಂತಾದ ಅನೇಕ ಕೀರ್ತನೆಗಳನ್ನು

ಕಾಣಬಹುದು. ಕನಕದಾಸರ 'ರಾಮಧಾನ್ಯ ಚರಿತೆ' ಯಲ್ಲಿ ಅಕ್ಕಿ ಮತ್ತು ರಾಗಿ ಹೊಂದಿಕೊಂಡು ಹೋಗಬೇಕೆಂಬ ಆಶಯವಿದೆ. ರಾಗಿ ಜನಸಾಮಾನ್ಯರ ಆಹಾರ, ಸಾಮಾನ್ಯ ಜನರ ಆರೋಗ್ಯದ ಮೂಲ. ರಾಗಿಗೆ ಅಕ್ಕಿಯಂತೆ ಯಜ್ಞ ಯಾಗಾದಿಗಳಲ್ಲಿ ಮಡಿಮಡಿಯಾಗಿ ಬಳಕೆಗೊಂಡು ಮಂತ್ರಾಕ್ಷತೆಯಾಗುವ ಮೆರಗಿಲ್ಲ. ಪಂಡಿತರು ಬಳಸುವ ಧಾನ್ಯವಲ್ಲ. ರಾಗಿಗೆ ಬಾಳಿಕೆಯ ತಾಳಿಕೆಯ ಗುಣವಿದೆ. ದಿನನಿತ್ಯದ ಬದುಕಿನಲ್ಲಿ ಸೇರಿ ಜೀರ್ಣಗೊಂಡು ಬದುಕನ್ನು ಕಟ್ಟುವ ಗುಣವಿದೆ. ಆದ್ದರಿಂದಲೇ ಅದು ರಾಮನಿಗೆ ಪ್ರಿಯವಾಗಿ, ರಾಘವ ಧಾನ್ಯವಾಗಿ, ರಾಗಿಯ ಅಂಬಲಿ ಉಂಡವರು ರಾಮ ನಾಮವನ್ನು ಸವಿದಂತೆ ಎಂದು ಕನಕದಾಸರು ತಮ್ಮದೇ ಆದ ತಾತ್ವಿಕ ನಿಲುವನ್ನು ಕೊಡುತ್ತಾರೆ. 'ಅನುದಿನದಲಿ ಬಹ ಸುಖ ದುಃಖ ನಿನದಯ್ಯ' ಎಂಬಂಥ ನಿತ್ಯಾನುಭವದ ನೆಲೆಯನ್ನು ಧರ್ಮದ ನೆಲೆಯನ್ನಾಗಿ ಬಣ್ಣಿಸುತ್ತಾರೆ. ಶ್ರೇಷ್ಠರು –ಸಾಮಾನ್ಯರು ಎಂದು ಎರಡಾಗಿ ಒಡೆದ ಸಮಾಜದ ವಿಶ್ಲೇಷಣೆಯ ಧ್ವನಿ ಇಲ್ಲಿದೆ. ರಾಮಧಾನ್ಯ ಚರಿತೆಯಲ್ಲಿ ಕನಕದಾಸರು ಎರಡು ಶ್ರೇಣಿಗಳನ್ನು ಎರಡು ಜಾತಿ ವರ್ಗಗಳ ಮೌಲ್ಯಗಳನ್ನು ತುಲನೆಗೆ ಒಳಪಡಿಸುತ್ತಾರೆ. ಮೇಲುಜಾತಿ–ಕೆಳಜಾತಿ, ಬ್ರಾಹ್ಮಣ–ಶೂದ್ರ. ಸಂಸ್ಕೃತ–ದೇಶಭಾಷೆ, ದುಡಿದು ತಿನ್ನುವ ವರ್ಗ ಈ ಎಲ್ಲಾ ವೈರುಧ್ಯಗಳನ್ನು ಕನಕದಾಸರು ತಮ್ಮ ಕಾವ್ಯದೊಳಗೆ, ವೈರುಧ್ಯಗಳೆಂದೇ ಚಿತ್ರಿಸುತ್ತಾರೆ. ರಾಮಧಾನ್ಯ ಚರಿತೆಯಲ್ಲಿ ಸಾಮಾಜಿಕ ನ್ಯಾಯದ ಪ್ರತಿಪಾದನೆ ಮಾಡಿದ್ದಾರೆ. ಈ ಸಮಾಜದಲ್ಲಿ ಹುಟ್ಟುವ ಪ್ರತಿಯೊಬ್ಬನಿಗೂ ಅವನು ಯಾವುದೇ ಜಾತಿ–ಧರ್ಮಕ್ಕೆ ಸೇರಿದ್ದರೂ ಸರಿಯಾದ ಅವಕಾಶಗಳು, ಸ್ಥಾನಮಾನಗಳು ದೊರೆಯಬೇಕು. ತಮ್ಮ ಹಕ್ಕಿನಿಂದ ಯಾರೂ ವಂಚಿತರಾಗಬಾರದು. ಮೇಲು–ಕೀಳು ಭಾವನೆಗಳು ಇರಬಾರದು. ಸಮಾಜದ ಅಭಿವೃದ್ಧಿ ಶಾಂತಿ ನೆಮ್ಮದಿಯಿಂದ ಸಾಧ್ಯವಾಗುತ್ತದೆ ಎಂಬ ಆಶಯವನ್ನು ಪ್ರತಿಪಾದಿಸಿದ್ದಾರೆ. ಇದು ಎಲ್ಲಾ ಆಧುನಿಕ ಅಪೇಕ್ಷೆಗಳನ್ನು ಈಡೇರಿಸುವಂತಹ ಕೃತಿ. ವರ್ಗ, ಜಾತಿ, ಸಂಸ್ಕೃತಿಗಳ ಕುರಿತಾದ ಆಧುನಿಕ ಚಿಂತನೆಗಳನ್ನು ಇಲ್ಲಿ ಕಾಣಬಹುದು.

ವೈದಿಕ ಧರ್ಮದ ಅಂಧ ಆಚರಣೆ ಮತ್ತು ಮೂಢನಂಬಿಕೆಗಳನ್ನು ಕೀರ್ತನೆಗಳಲ್ಲಿ ಖಂಡಿಸುತ್ತಾರೆ. 'ಆವ ಧರ್ಮವೋ ಇದು ಆವ ಕರ್ಮವೋ' ಎನ್ನುತ್ತಾ ಅವೈದಿಕ ಆಚರಣೆಗಳನ್ನು ಟೀಕಿಸುತ್ತಾರೆ. 'ದಾನಧರ್ಮವ ಮಾಡಿ ಸುಖಿಯಾಗು ಮನವೇ, ಹೀನವೃತ್ತಿಯಲಿ ನೀ ಕೆಡಬೇಡ ಮನವೇ' ಎನ್ನುವ ಸಾಲುಗಳು ನಿಜವಾದ ಧರ್ಮ ಯಾವುದು ಎನ್ನುವುದನ್ನು ಹೇಳುವ ಪ್ರಯತ್ನವನ್ನು ಮಾಡುತ್ತದೆ.

ಸಮಾಜದ ಅಂಧ ಆಚರಣೆಗಳನ್ನು ಟೀಕಿಸುವ ಕೀರ್ತನೆಗಳು ನಿಜವಾದ ಭಕ್ತಿ ಮತ್ತು ಆಚರಣೆಯ ಬಗ್ಗೆ ಹೇಳುತ್ತವೆ. 'ವರಕವಿಗಳ ಮುಂದೆ ನರಕವಿಗಳ ವಿದ್ಯಾ ತೋರಬಾರದು । ಕೋಪಿಗಳಿದ್ದಲ್ಲಿ ಅನುಭವ ಗೋಷ್ಠಿಯ ಆಡಬಾರದು। ಪರರನು ಬೈದು ಪಾತಕಕೆ ಮುನ್ನೊಳಗಾಗಬಾರದು.' ಈ ಕೀರ್ತನೆಯಲ್ಲಿ ಬದುಕಿನಲ್ಲಿ ಹೇಗಿರಬೇಕು ಮತ್ತು ಯಾವ ಸಂದರ್ಭದಲ್ಲಿ ಯಾವ ರೀತಿ ವರ್ತಿಸಬೇಕು ಎನ್ನುವ ವಿವೇಕವನ್ನು ಹೇಳಿದ್ದಾರೆ. 'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ। ನಿತ್ಯ

ಜ್ಞಾನಿಯಾದ ಮ್ಯಾಲೆ ಚಿಂತೆ ಯಾತಕೆ॥' ಎನ್ನುವ ಕೀರ್ತನೆ ಸತ್ಯವಂತರ ಸಂಗದ ಮಹತ್ವವನ್ನು ತಿಳಿಸುತ್ತದೆ.

ಸಾಮಾನ್ಯವಾಗಿ ಕನಕದಾಸರ ಕೀರ್ತನೆಗಳ ಬಗ್ಗೆ ಮಾತನಾಡುವಾಗ ಅವರು ಕೆಳವರ್ಗದವರಾಗಿದ್ದು ಅನಂತರ ದಾಸಕೂಟದಲ್ಲಿದ್ದುಕೊಂಡು ಅನುಭವಿಸಿದ ಸಂಗತಿಗಳನ್ನು ಆಧರಿಸಿ ಕೆಲವು ನಿರ್ಣಯಾತ್ಮಕವಾದ ನಿಲುವುಗಳನ್ನು ತೆಗೆದುಕೊಂಡಿರುವುದನ್ನು ಕಾಣಬಹುದು. ಅಂಥ ಮಾತುಗಳಲ್ಲಿ ಕನಕದಾಸರ ಕೀರ್ತನೆಗಳು ತನ್ನ ವರ್ಗದ ನೆನಪುಗಳನ್ನು ಕಳೆದುಕೊಳ್ಳಲಾಗದೆ ಇನ್ನೊಂದು ಉನ್ನತ ವರ್ಗದಲ್ಲಿ ಪೂರ್ಣವಾಗಿ ಬೆರೆಯಲಾಗದೆ ಹೋಗುವವನ ತಾಕಲಾಟಗಳು ಇದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತದೆ. ಉದಾಹರಣೆ ಕನಕದಾಸರ ರಾಮಧಾನ್ಯ ಚರಿತೆಯ ಬಗ್ಗೆ ಮಾತನಾಡುವಾಗ ಅದರಲ್ಲಿ ಬಡವ ಮತ್ತು ಶ್ರೀಮಂತರ ನಡುವಣ ಅಂತರವನ್ನು ಕುರಿತಂತೆ ತಮ್ಮ ಸಮಕಾಲೀನ ವಿಚಾರಧಾರೆ ಹಾಗೂ ಅದರ ಪರಿಣಾಮವಾಗಿ ಉಂಟಾಗಿದ್ದ ಸಾಮಾಜಿಕ ವೈಷಮ್ಯಗಳನ್ನು ಹೇಳಲು ಪ್ರಯತ್ನಿಸಲಾಗಿದೆ ಎಂಬ ಅಭಿಪ್ರಾಯವನ್ನು ಕಾಣಬಹುದು.

ಜಾತ್ಯತೀತ ಸಮಾಜದ ಪರಿಕಲ್ಪನೆ 'ಸಮಾನತೆ'ಯನ್ನು ತರುವುದು ಕನಕದಾಸರ ಮುಖ್ಯ ಉದ್ದೇಶವಾಗಿತ್ತು. ತಮ್ಮ ಕುಲದ ಬಗೆಗಿನ ಪ್ರಶ್ನೆಗಳು ಕನಕದಾಸರನ್ನು ನೋಯಿಸುತ್ತಿದ್ದಾಗ ಅದಕ್ಕೆ ಕೊಟ್ಟ ಉತ್ತರವೇ ಕೀರ್ತನೆಯ ರೂಪ ತಾಳಿದೆ. ಹುಟ್ಟಿದ ಕುಲ-ಜಾತಿಯಿಂದ ಒಬ್ಬ ಶ್ರೇಷ್ಠನಾಗಲಿ ಕನಿಷ್ಠನಾಗಲಿ ಆಗುವುದಿಲ್ಲ. ಅವನು ಮುಟ್ಟಿದ ಸಾಧನೆ-ಸಿದ್ಧಿಯಿಂದ ಶ್ರೇಷ್ಠ ಕನಿಷ್ಠನಾಗುತ್ತಾನೆ. ಮೇಲು ಎಂದು ಹೇಳುವವರಲ್ಲಿ ಕೀಳು ಭಾವನೆಗಳಿರಬಹುದು. ಅದು ಅವರ ನಡೆನುಡಿಯಿಂದ, ಸಾಧನೆ ಸಿದ್ಧಿಯಿಂದ ನಿರ್ಧಾರವಾಗುತ್ತದೆಯೇ ವಿನಾ ಬರಿ ಹುಟ್ಟಿನಿಂದ ಅಲ್ಲ ಎಂಬುವುದನ್ನು ಆ ಮೂಢಾತ್ಮರಿಗೆ ತಿಳಿಯ ಹೇಳಬೇಕಾಗಿ ಬಂದದ್ದು ದುರ್ದೈವ. ''ಕುಲದ ಆಧಾರದ ಮೇಲೆ ವ್ಯವಹಾರ ನಡೆಸುವುದು ಕನಕರ ದೃಷ್ಟಿಗೆ ಅಸಹ್ಯವಾಗಿ ಅಮಾನುಷವಾಗಿ ತೋರುತ್ತದೆ. ಆದ್ದರಿಂದಲೇ ಕುಲದ ಬಗೆಗೆ ಕನಕರ ಈ ನುಡಿಮುತ್ತುಗಳು ಎಲ್ಲಾಕಾಲಕ್ಕೂ ಮೌಲ್ಯವಾಗಿ ಉಳಿಯುವಂಥವು. 'ಕುಲ ಕುಲ ಕುಲವೆನುತಿಹರು, ಕುಲವಾವುದು ಸತ್ಯ ಸುಖವುಳ್ಳ ಜನರಿಗೆ। ಎನ್ನುತ್ತಾ, 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂದು ಕುಲದ ಕುರಿತಾಗಿ ಕೀರ್ತನೆಯ ಮೂಲಕ ಪ್ರಶ್ನಿಸುತ್ತಾರೆ. ಈ ಕೀರ್ತನೆಗಳಲ್ಲಿ ಮೊದಲಿನ ಕೀರ್ತನೆಯು ಸಂಪ್ರದಾಯವಾದಿ ಸಮಾಜದ ವಾಸ್ತವದ ದರ್ಶನವನ್ನು ಮಾಡಿಸುತ್ತದೆ. ಎರಡನೆಯ ಕೀರ್ತನೆಯಲ್ಲಿ ಸಾಂಪ್ರದಾಯಿಕ ಬಿಗಿಯ ಅತಿರೇಕದಲ್ಲಿ ಹುಟ್ಟಿಕೊಂಡ ಕೆಡುಕುಗಳ ಮೂಲ 'ಕುಲ' ಪರಿಕಲ್ಪನೆಯ ಅತಿರೇಕ ಎಂಬುದನ್ನು ಕನಕದಾಸರು ಧ್ವನ್ಯಾತ್ಮಕವಾಗಿ ಸೂಚಿಸುತ್ತಾ ಹೋಗುತ್ತಾರೆ. ಹುಟ್ಟಿನಿಂದ ಕುಲದ ಮಹತ್ವ ಬರುವುದಲ್ಲ. ವ್ಯಕ್ತಿ ಸಮಾಜದಲ್ಲಿ ತನ್ನ ಸಾಧನೆಯ ಮೂಲಕ ಯಾವ ಎತ್ತರಕ್ಕೆ ಹೋಗುತ್ತಾನೆ ಅದೇ ನಿಜವಾದ 'ಕುಲ' ಎನ್ನುತ್ತಾರೆ. ಅದಕ್ಕೆ ಕೆಸರಿನಲ್ಲಿ ಹುಟ್ಟಿದ ತಾವರೆ ದೇವರ ಪಾದ ಸೇರುವ ಅಪೂರ್ವ ಉದಾಹರಣೆಯನ್ನು

ನೀಡುತ್ತಾರೆ. 'ಹುಟ್ಟದ ಯೋನಿಗಳಿಲ್ಲ' ಎನ್ನುವುದನ್ನು ಒಂದು ಜೈವಿಕ ವಾಸ್ತವವಾಗಿ ನಿರ್ಲಿಪ್ತ ಭಾವದಿಂದ ಹೇಳುತ್ತಾರೆ. ಎಲ್ಲಾ ಕುಲದವರ ಹುಟ್ಟು ಯೋನಿಯಿಂದಲೇ ಎನ್ನುವ ಭಾವ ಅಲ್ಲಿದೆ. ಅದರಲ್ಲಿ ಶ್ರೇಷ್ಠ –ಕನಿಷ್ಠ ಎಂಬುದಿಲ್ಲ ಎನ್ನುವ ಧ್ವನಿ ಅವರ ಕೀರ್ತನೆಗಳಲ್ಲಿದೆ. ಜೀವನದ ಸತ್ಯಗಳನ್ನೇ ಸಮರ್ಥನೆಗಳಾಗಿ ಒದಗಿಸುತ್ತಾ ಹೋಗುತ್ತಾರೆ. ಕನಕದಾಸರು ಸತ್ಯಕ್ಕೆ ನಿಷ್ಠುರರಾಗುವ ಪರಿ ಬೆರಗು ಹುಟ್ಟಿಸುವಂತದ್ದು. ರಾಜಕಾರಣ, ಧರ್ಮವ್ಯವಸ್ಥೆಗಳೆಲ್ಲ ಯಾವುದೋ ಸ್ವಾರ್ಥಕ್ಕಾಗಿ 'ಜಾತಿ' ಯಂತಹ ಸೂಕ್ಷ್ಮ ಸಂಗತಿಗಳನ್ನು ಕೇಂದ್ರವಾಗಿಸಿಕೊಂಡು ತಮ್ಮ ಲಾಭಕ್ಕನುಗುಣವಾಗಿ ವಿವೇಚಿಸುತ್ತವೆ. ಜಾತಿವ್ಯವಸ್ಥೆಯನ್ನೇ ಪುನರುತ್ಥಾನಗೊಳಿಸುತ್ತಾ ತನ್ಮೂಲಕ ಸಾಮಾಜಿಕ ನ್ಯಾಯದ ನಂಬಿಕೆಗಳನ್ನೇ ಬುಡಮೇಲು ಮಾಡಲು ಯತ್ನಿಸುತ್ತಿವೆ. ಅಂತಹ ಹೊತ್ತಿನಲ್ಲಿ ಮತ್ತೆ ಮತ್ತೆ ಮಾನವೀಯತೆ ಪರವಾಗಿ ಸಾಮಾಜಿಕ ನ್ಯಾಯದ ಪರವಾಗಿ, ನಿಂತ ಕನಕದಾಸರು ನೆನಪಾಗುತ್ತಾರೆ.

ಹೊರಗಿನ ಆಡಂಬರಕ್ಕಿಂತ ಮನಸ್ಸಿನ ಶುದ್ಧತೆ ಮುಖ್ಯ. ಕೇವಲ ಪೂಜೆ, ಆಚರಣೆ ಮತ್ತು ಧಾರ್ಮಿಕ ವಿಧಿವಿಧಾನಗಳಿಂದ ಮನುಷ್ಯ ಶ್ರೇಷ್ಠನಾಗುವುದಿಲ್ಲ. ಆತನ ಒಳ್ಳೆಯ ಗುಣಗಳೇ ಭಗವಂತನ ಸಾಕ್ಷಾತ್ಕಾರಕ್ಕೆ ಪ್ರೇರಣೆಯಾಗುತ್ತದೆ. ಅದಕ್ಕೇ ಉಡುಪಿಯ ಕೃಷ್ಣನ ನಿದರ್ಶನವೇ ಸಾಕ್ಷಿಯಾಗಿದೆ. ಸಮಾಜವನ್ನು ಬದಲಾಯಿಸುವ ಮೊದಲು ವ್ಯಕ್ತಿಯು ತನ್ನೊಳಗಿನ ದೋಷಗಳನ್ನು ಗುರುತಿಸಿ ತಿದ್ದಿಕೊಳ್ಳಬೇಕು ಎನ್ನುವುದು ಕನಕದಾಸರ ನಿಲುವು.

ಕನಕದಾಸರ ಸಾಹಿತ್ಯದಲ್ಲಿ ಮೌಢ್ಯವನ್ನು ನಿರಾಕರಿಸುವ ಹಾಗೂ ವೈಚಾರಿಕತೆಯನ್ನು ಪ್ರತಿಪಾದಿಸುವ ಅಂಶಗಳಿವೆ. ಅವರು ರಾಜಪ್ರಭುತ್ವವನ್ನು ನಿರಾಕರಿಸಿ, ಭಕ್ತಿ ಮಾರ್ಗಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡಿರುವುದನ್ನು ಕಾಣಬಹುದು. ಎಲ್ಲರಂತೆ ಸಾಮಾನ್ಯರಂತಿದ್ದು ಬದುಕಿನಿಂದಲೇ ಅರಿವಿನೆಡೆಗೆ ಚಲಿಸಿದವರು. 'ದಂಡನಾಯಕ' ಎಂಬ ವೃತ್ತಿಯನ್ನು ಅವಲಂಬಿಸಿದ್ದ ಹೊತ್ತಿಗಂತೂ ಅದನ್ನು ಮೀರಿ ಮತ್ತೇನೋ ಇದೆ ಎಂದು 'ಹುಡುಕಾಟ'ಕ್ಕೆ ಪರ್ಯಾಯವಾದವರು. 'ದಾಸ'ನಾಗಿ ಜನಮಾನಸದಲ್ಲಿ ಇಂದಿಗೂ ತನ್ನ ಇರವನ್ನು ಸ್ಥಾಪಿಸಿದವರು. ಅದಕ್ಕೆ ಕನಕದಾಸರು ಇಂದಿಗೂ ಪ್ರಸ್ತುತವಾಗುವುದು. ಕನಕದಾಸರ ಕೀರ್ತನೆಗಳು ಸಾಮಾಜಿಕ ಚಿಂತನೆಗಳು ಜಾತಿ, ಅಸಮಾನತೆಗೆ ಮಾತ್ರ ಸೀಮಿತಗೊಳ್ಳದೆ, ಮನುಷ್ಯನ ಬದುಕನ್ನು ಎತ್ತರಿಸುವ ಅನೇಕ ಮೌಲ್ಯಗಳನ್ನು ಹೊಂದಿದೆ. ಮೌಢ್ಯ ನಿರಾಕರಣೆಯ ಅಂಶಗಳೂ ಅವರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ನಿರಂತರ ಶೋಧನೆಗೆ ಒಳಪಡಿಸಿಕೊಳ್ಳುತ್ತಾ ಹೊಸ ಸಮಾಜದ ನಿರ್ಮಾಣಕ್ಕೆ ತುಡಿಯುವ ಅವರ ಭಾವ ಕೀರ್ತನೆಗಳಲ್ಲಿ ವ್ಯಕ್ತವಾಗಿದೆ. ಅವರು ಸದಾ ಚಲನಶೀಲತೆಯ ಸಮಾಜದ ಕಡೆಗೆ ಚಿಂತಿಸಿರುವದನ್ನು ಕಾಣಬಹುದು. ಕನಕದಾಸರ ಸಾಹಿತ್ಯವು ಭಕ್ತಿಯ ಜೊತೆಗೆ ಸಾಮಾಜಿಕ ಜಾಗೃತಿಯನ್ನು ಮೂಡಿಸಿದ ಸಾಹಿತ್ಯ. ಜಾತಿಭೇದದ ವಿರೋಧ, ಅಂಧಾನುಕರಣೆಯ ವಿರೋಧ, ಸಮಾನತೆ, ಮಾನವೀಯತೆ, ನೈತಿಕತೆ, ಆತ್ಮಪರಿಶೀಲನೆ ಮತ್ತು ಸಾಮಾಜಿಕ ನ್ಯಾಯದಂತಹ ಮೌಲ್ಯಗಳು ಅವರ ಕೃತಿಗಳ ಮೂಲ ಅಂಶಗಳಾಗಿವೆ. ಇಂದಿನ ತಂತ್ರಜ್ಞಾನದ

ಯುಗದಲ್ಲಿ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿದ್ದು, ಜಾತಿ ದ್ವೇಷ, ಅಸೂಯೆಯನ್ನು ಕಾಣಬಹುದು. ಆದ್ದರಿಂದಲೇ ಕನಕದಾಸರ ಕೃತಿಗಳು ಹಾಗೂ ಅವುಗಳಲ್ಲಿರುವ ಸಾಮಾಜಿಕ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿದ್ದು, ದಾರಿದೀಪವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಶ್ರೀರಾಮ ಅಚನೂರು, (2011), ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಬಾಗಲಕೋಟೆ: ಗಗನ ಪ್ರಕಾಶನ.
2. ಶಿವಾನಂದ ಕೆಳಗಿನಮನಿ, (2015), ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ, ಬೆಂಗಳೂರು: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್.
3. ಚಿಕ್ಕಣ್ಣ ಕಾ.ತ., (2012), ಕನಕ ಕಿರಣ, ಬೆಂಗಳೂರು: ಶ್ರೀ ಮಾಲತೇಶ್ ಪ್ರಕಾಶನ.
4. ಶಿವರಾಮ ಶೆಟ್ಟಿ ಬಿ. (ಸಂ), (2018), ಕನಕ ಚಿಂತನ (2007–2008), ಮಂಗಳಗಂಗೋತ್ರಿ: ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ.
5. ಶಿವರಾಮ ಶೆಟ್ಟಿ ಬಿ. (ಸಂ), (2010), ಕನಕ ಚಿಂತನ (2009–2010), ಮಂಗಳಗಂಗೋತ್ರಿ: ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ.
6. ಪಾವಂಜೆ ಗುರುರಾವ್ (ಸಂ), (2011), ಕನಕದಾಸರ ಕೀರ್ತನೆ, ಮಂಗಳೂರು: ಆಕೃತಿ ಪ್ರಕಾಶನ.
7. ಶಿವರಾಮ ಶೆಟ್ಟಿ ಬಿ. (ಸಂ), (2013), ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಮಂಗಳಗಂಗೋತ್ರಿ: ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ.